ನಿಜಕ್ಕೂ ಬರಿಯ ಕೆಮ್ಮು ಒಂದು ಕಾಯಿಲೆಯೇ ಅಲ್ಲ. ಅದು ನಿಮ್ಮ ಅನುಮತಿಯನ್ನು ಕೇಳಿಕೊಂಡು ಬರುವುದಿಲ್ಲ. ಹೋಗುವಾಗ ನಿಮ್ಮ ಅಪ್ಪಣೆ ಸಹಾ ಕೇಳುವುದಿಲ್ಲ. ಇದ್ದಾಗಲೂ ನಿಮಗೆ ಅಂತಹ ಉಪಟಳ ಕೊಡಲಾರದು. ಕನಿಷ್ಠವಾದ ವಿಶ್ರಾಂತಿಯನ್ನೂ ಸಹಾ ಅದು ಬಯಸುವುದಿಲ್ಲ. ಕೆಮ್ಮು ಕೆಮ್ಮುತ್ತಲೇ ನಿಮ್ಮ ಪ್ರತಿದಿನದ ಕೆಲಸಗಳನ್ನು ನೀವು ಅಡ್ಡಾಡಿಕೊಂಡು ಮಾಡಿಕೊಳ್ಳಬಹುದು. ಸಿಂಪಲ್ಲಾದ ಗಂಟಲು ಕೆರೆತವೊಂದೇ ಸಾಕು, ಕೆಮ್ಮು ಆರಂಭವಾಗಲು. ಅದಕ್ಕೇ ಆಸ್ಪತ್ರೆಗೆ ಹೋದಾಗ ಡಾಕ್ಟರು 'ಸ್ವಲ್ಪ ನಿಮ್ಮ ಬಾಯಿ ಆ... ಅಂತ ತೆಗೀರಿ. ಎಲ್ಲಿ ನಿಮ್ಮ ನಾಲಗೆ ಪೂರಾ ಹೊರ ಚಾಚಿ ನೋಡೋಣ...' ಅಂತ ಬಾಯನ್ನು ಇಷ್ಟಗಲ ತೆಗೆಯಿಸಿ ಬ್ಯಾಟರಿ ಲೈಟು ಬಿಟ್ಟು ನೋಡುವುದು. ಏನಾದರೂ ಗಂಟಲು ಸೋಂಕು ಇದ್ದಲ್ಲಿ ಹೀಗೆ ತಪಾಸಣೆ ಮಾಡುವ ಮೂಲಕ ವೈದ್ಯರು ಕಂಡುಕೊಳ್ಳುತ್ತಾರೆ. ಈಗಂತೂ ಬಾಯೊಳಗೆ ಬ್ಯಾಟರಿ ಹಾಕಿ ನೋಡುವ ಡಾಕ್ಟರುಗಳೇ ಇಲ್ಲ ಬಿಡಿ. ಅದೆಲ್ಲ ನಮ್ಮ ಕಾಲೇಜು ದಿನಗಳಲ್ಲೇ ಮುಗಿದುಹೋಯಿತು. ನಾವು ಚಿಕ್ಕವರಾಗಿದ್ದಾಗ ನಮ್ಮೂರಿನ ಡಾಕ್ಟರಿಗೆ ಬಾಯಿ ತೆರೆದು ತೋರುವುದು ಕಡ್ಡಾಯ. ಅದಾದ ಬಳಿಕ ಹಸ್ತದ ಕೆಳಗಿನ ನಾಡಿಯನ್ನು ಒತ್ತಿ ಹಿಡಿದು ಗತ್ತಿನಿಂದ ತಮ್ಮ ಎಡಗೈನಲ್ಲಿನ ವಾಚನ್ನು ತುಸು ಹೊತ್ತು ಗಮನಿಸುತ್ತಿದ್ದರು. ನಂತರ ಪರೀಕ್ಷಾರ್ಥವಾಗಿ ನೋಡುತ್ತ 'ನಿನ್ನೆ ಏನೇನು ತಿಂದೆ ಹೇಳು...?' ಅಂತ ಪ್ರಶ್ನೆ ಹಾಕುತ್ತಿದ್ದರು. ಹಾಗೆ ಕೇಳುತ್ತಲೇ ಅವರ ಕೈಯಲ್ಲಿನ ಸ್ಟೆತೋಸ್ಕೋಪು ನಮ್ಮ ಎದೆ ಮತ್ತು ಬೆನ್ನ ಮೇಲೆಲ್ಲಾ ಓಡಾಡುತ್ತಿತ್ತು.



ಆಮೇಲೆ ಅವರ ಕೋಣೆಯಲ್ಲೇ ಇದ್ದ ಹಾಸಿಗೆಯನ್ನು ತೋರುತ್ತ ಮಲಗಲು ಹೇಳುತ್ತಿದ್ದರು. ಇನ್ನೆಲ್ಲಿ ಸೂಜಿ ಕೈಗೆತ್ತಿಕೊಳ್ಳುತ್ತಾರೋ ಅಂತ ನಾವೆಲ್ಲ ದಿಗಿಲು ಬೀಳುತ್ತಿದ್ದೆವು. ಹೆದರಿಕೊಂಡು ಅಪ್ಪನ ಮುಖ ನೋಡಿದರೆ 'ಮಲಿಕ್ಕೊಳೋ.. ಇಂಜೆಷನ್ನು ಹಾಕಲ್ಲ, ಬರೀ ಪರೀಕ್ಷೆ ಮಾಡ್ತಾರೆ ಅಷ್ಟೇ...' ಅಂತ ಧೈರ್ಯ ಕೊಡುತ್ತಿದ್ದ. ಹತ್ತಿರ ಬಂದ ಡಾಕ್ಟರು ನಾವು ಹಾಕಿಕೊಂಡಿದ್ದ ಷರಟು ಮೇಲೆತ್ತಲು ಹೇಳಿ ತಾವೇ ಕೈಯಾರೆ ನಮ್ಮ ಹೊಟ್ಟೆಯನ್ನು ಅಲ್ಲಲ್ಲಿ ಅದುಮುತ್ತಿದ್ದರು. ಇಲ್ಲಿ ನೋಯ್ತುದಾ.. ಅಲ್ಲಿ ನೋಯ್ತುದಾ.. ಅಂತ ಮತ್ತೆ ಪ್ರಶ್ನೆಗಳು. ಅವರ ಈ ಚಿಕಿತ್ಸಾ ವೈಖರಿಗೇ ಎಷ್ಟೋ ಕಾಯಿಲೆಗಳು ಹೇಳ ಹೆಸರಿಲ್ಲದಂತೆ ಪೇರಿ ಕೀಳುತ್ತಿದ್ದವು ಅನ್ನಿಸುತ್ತಿತ್ತು. ಈಗಿನ ಕಾಲದ ವೈದ್ಯರುಗಳೆಲ್ಲ ಸ್ಪೆಷಲಿಸ್ಟುಗಳು. ಅವರಿಗೆ ಅಷ್ಟೆಲ್ಲ ಟೈಮಿರುವುದಿಲ್ಲ. ಫೀಸೂ ಕೂಡ ದುಬಾರಿ. ಅವರು ನಿಮ್ಮನ್ನು ಮುಟ್ಟುವುದಿರಲಿ, ಕಣ್ಣೆತ್ತಿ ನೋಡುವುದೂ ದುಸ್ತರವೇ. ನಾಲ್ಕೈದು ಪ್ರಶ್ನೆಗಳನ್ನು ಕೇಳಿ ನಿಮ್ಮಿಂದಲೇ ಉತ್ತರ ಪಡೆದು ಮಾತ್ರೆಗಳನ್ನು ಬರೆದು ಕೊಟ್ಟರೆ ಅಷ್ಟಕ್ಕೇ ಧನ್ಯ... ಧನ್ಯ...

ಇರಲಿ... ಕೆಮ್ಮಿನ ವಿಷಯಕ್ಕೆ ಮತ್ತೆ ವಾಪಸು ಬರೋಣ. ನಿಮ್ಮ ಮಗನೋ, ಮಗಳೋ ಕೆಮ್ಮುತ್ತಿದ್ದರೆ ನೀವು ಏನು ಮಾಡುತ್ತೀರಿ...? ಸನಿಹ ಕುಳಿತು ತಲೆ ಸವರುತ್ತೀರಿ, ಎದೆ ನೀವುತ್ತೀರಿ, ಮುಲಾಮು ಹಚ್ಚಿ ಸಂತೈಸುತ್ತೀರಿ. ವಯಸ್ಸಾದ ತಂದೆ– ತಾಯಿಗಳು ಕುಸುಗಿದರೆ ಸಾಕು, 'ಏನಪ್ಪಾ.. ಹುಸಾರೈತಾ ಇಲ್ವಾ...? ಯಾಕೆ, ಏನಾತು... ಮಾತ್ರೆ ಸರಿಯಾಗಿ ತಗೋತಾ ಇಲ್ವಾ... ನಡಿ, ಒಮ್ಮೆ ಡಾಕ್ಟ್ರು ಹತ್ರ ಹೋಗಿ ತೋರುಸ್ಕಂಡ್ ಬರಾಣ